ಆ) ಚಾಮರಾಜನಗರ ಜಿಲ್ಲೆಯು ಈ ಯೋಜನೆಯಲ್ಲಿ ಸೇರ್ಪಡೆಯಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ, ಅತ್ಯಂತ ಹಿಂದುಳಿದ ಈ ಜಿಲ್ಲೆಯನ್ನು ಈ ಯೋಜನೆಗೆ ಸೇರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ವಿದ್ಯುದೀಕರಣಕ್ಕಾಗಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದ್ಧೀಕರಣ ಯೋಜನೆ ಮೊದಲನೇ ಹಂತದಲ್ಲಿ ಈ ಕೆಳಗಿನ 17 ಜಿಲ್ಲೆಗಳಲ್ಲಿ ಮಂಜೂರಾಗಿದೆ.

| **ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ)** | **ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕೋ)** |
|---|---|
| 1.ದಾವಣಗೆರೆ | 6. ಮಂಡ್ಯ |
| 2. ತುಮಕೂರು | 7. ಹಾಸನ |
| 3. ಚಿತ್ರದುರ್ಗ | 8. ಮೈಸೂರು |
| 4. ಬೆಂಗಳೂರು ಗ್ರಾಮೀಣ | |
| 5. ಕೋಲಾರ | |
| **ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ)** | **ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ (ಜೆಸ್ಕಾಂ)** |
| 9. ಬಾಗಲಕೋಟೆ | 14. ಕೊಪ್ಪಳ |
| 10. ಹಾವೇರಿ | 15. ಬಳ್ಳಾರಿ |
| 11. ಬಿಜಾಪುರ | 16. ಬೀದರ್ |
| 12. ಧಾರವಾಡ | 17. ರಾಯಚೂರು |
| 13. ಗದಗ | |

ಆ ಮತ್ತು ಇ) ಚಾಮರಾಜನಗರ ಜಿಲ್ಲೆಯು ಈ ಯೋಜನೆಯಡಿಯಲ್ಲಿ ಎರಡನೇ ಹಂತದಲ್ಲಿ ಸೇರ್ಪಡೆಗೊಂಡಿದ್ದು, ಇದಕ್ಕೆ ಗ್ರಾಮೀಣ ವಿದ್ಯುದೀಕರಣ ನಿಗಮವು ಜೂನ್–2006ರಲ್ಲಿ ತಾತ್ವಿಕ ಒಪ್ಪಿಗೆಯನ್ನು ನೀಡಿರುತ್ತದೆ.

695(1238) ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ) : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ಜಿಲ್ಲೆ ಶಿರಹಟ್ಟಿ ಮತಕ್ಷೇತ್ರದಲ್ಲಿ (ಕೆ.ಎಸ್.ಹೆಚ್.ಐ.ಪಿ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಅಡಿ ರಸ್ತೆ ಡಾಂಬರೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ;

ಆ) ಕೈಗೊಂಡಿದ್ದಲ್ಲಿ, ಯಾವ ಯಾವ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗಿದೆ (ವಿವರ ನೀಡುವುದು);

ಇ) ಎಷ್ಟು ಕಿಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ;

ಈ) ಈ ರಸ್ತೆಗಳಿಗೆ ಎಷ್ಟು ಹಣ ವೆಚ್ಚ ಮಾಡಲಾಗಿದೆ (ವಿವರ ನೀಡುವುದು)

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

697(719) ಶ್ರೀ ಗೋಪಾಲ ಪೂಜಾರಿ (ಬೈಂದೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ನಗರಸಭಾ ವ್ಯಾಪ್ತಿಯ ಪುತ್ತೂರು ಗ್ರಾಮದ ನಂ. 237–ಬಿ ರಾಷ್ಟ್ರೀಯ ಹೆದ್ದಾರಿ 17ರ ಪಕ್ಕ ಪರವಾನಗಿ ರಹಿತವಾಗಿ ಅಕ್ರಮ ಕಟ್ಟಡ ಕಟ್ಟಿಸಿರುವುದರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದ ಷರತ್ತುಬದ್ಧ ಆದೇಶ ಇದ್ದಾಗ್ಯೂ ಕೂಡ ಉಡುಪಿ ನಗರಸಭೆ ಅಕ್ರಮ ಕಟ್ಟಡವನ್ನು ಸಕ್ರಮಗೊಳಿಸಿರುವುದು ಸರಿಯೆ;

ಆ) ಇದು ನ್ಯಾಯಾಲಯದ ನಿಂದನೆಯಾಗುವುದಿಲ್ಲ;

ಇ) ಈ ಸಂಪೂರ್ಣ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇದಕ್ಕೆ ಸಂಬಂಧಿಸಿದವರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಉಡುಪಿ ನಗರಸಭೆ ವ್ಯಾಪ್ತಿಯ ಪುತ್ತೂರು ಗ್ರಾಮದ ಸರ್ವೆ ನಂ.237/ಬಿ ರಲ್ಲಿನ ನಿವೇಶನವು ರಾಷ್ಟ್ರೀಯ ಹೆದ್ದಾರಿ 17ರ ಪಕ್ಕದಲ್ಲಿ ರಾಷ್ಟ್ರೀಯ ಹೆದ್ದಾರಿಗೆ 29.50 ಮೀಟರ್ ಅಂತರದಲ್ಲಿದ್ದು, ಹೊಸ ಕಟ್ಟಡದ ರಚನೆಗೆ 40 ಮೀಟರ್ ದೂರದಲ್ಲಿರಬೇಕಾಗಿರುವುದರಿಂದ ಈ ನಿವೇಶನದಲ್ಲಿ ಕಟ್ಟಡ ನಿರ್ಮಿಸಲು ನೀಡಿದ್ದು ಷರತ್ತುಬದ್ಧ ಪರವಾನಗಿಯನ್ನು ನಗರಸಭೆಯು ಅಮಾನತ್ತಿನಲ್ಲಿಟ್ಟಿದ್ದ ಆದೇಶವನ್ನು ಅರ್ಜಿದಾರರಾದ ಶ್ರೀಮತಿ ಕೆ. ಶಾಂಭವಿ ಇವರು ಪ್ರಶ್ನಿಸಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: